kpeta.webly.com

ಉಪನಿರ್ದೇಶಕರ ಕಛೇರಿ,ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ

# ಶಾಲೆಗಳಲ್ಲಿ ದೈಹಿಕ ಶಿಕ್ಷಣ ಹಾಗೂ ದಾಖಲೆಗಳ ನಿರ್ವಹಣೆ





kpeta.weebly.com

ಪ್ರಸ್ತುತಿ

ಶ್ರೀ ವಸಂತ ಪಿ ಭಂಡಾರಿ

ಜಿಲ್ಲಾದೈಹಿಕ ಶಿಕ್ಷಣ ಅಧಿಕಾರಿಗಳು,

ಉಪನಿರ್ದೇಶಕರ ಕಛೇರಿ,ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ



kpeta.weebly.com

kpeta.webly.com

# ಶಾಲೆಯ ಪರಿಸರದಲ್ಲಿ ದೈಹಿಕ ಶಿಕ್ಷಣದ ಅವಶ್ಯಕತೆ

ದೈಹಿಕ ಶಿಕ್ಷಣವು ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಅಂಗ. ಸಾಮಾನ್ಯ ಶಿಕ್ಷಣವು ಚರ್ಚಾತ್ಮಕ ವಿಷಯಗಳನ್ನೊಳಗೊಂಡಿದ್ದರೆ, ದೈಹಿಕ ಶಿಕ್ಷಣವು ಚಟುವಟಿಕೆಗಳಿಂದ ಎಂಬ ತತ್ವ ಹೊಂದಿದೆ. ದೈಹಿಕ ಚಟುವಟಿಕೆಗಳಿಂದ ಮಕ್ಕಳ ಮಾನಸಿಕ, ಶಾರೀರಿಕ ಮತ್ತು ಭಾವನಾತ್ಮಕ ಗುಣಗಳ ಬೆಳವಣಿಗೆಯಾಗುತ್ತದೆ.

ದೈಹಿಕ ಶಿಕ್ಷಣದ ಮೂಲಕ ಶಾಲೆಯ ಪ್ರತಿಯೊಂದು ಮಗುವಿಗೂ ದೈಹಿಕ ಚಟುವಟಿಕೆಗಳನ್ನು ಮಾಡಿಸಿ, ಆರೋಗ್ಯಯುತ ಪರಿಸರವನ್ನು ನಿರ್ಮಾಣ ಮಾಡುವುದೇ ದೈಹಿಕ ಶಿಕ್ಷಣದ ಪ್ರಮುಖ ಗುರಿಯಾಗಿದೆ. ಇದರಿಂದ ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಆಯಾಮಗಳು ವೃದ್ಧಿಗೊಳ್ಳುತ್ತವೆ.

kpeta.weebly.com

kpeta.webly.com

# ಶಾಲಾ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ದೈಹಿಕ ಶಿಕ್ಷಣ

## ಶಾಲಾ ಪ್ರಾರಂಭದ ಗಂಟೆ.

ಶಾಲೆ ಪ್ರಾರಂಭವಾಗುವುದು ಶಾಲೆಯ ಗಂಟೆಯನ್ನು ಶಬ್ಧ ಮಾಡುವುದರಿಂದ. ಶಬ್ದವು ಮಕ್ಕಳನ್ನು ಎಚ್ಚೆತ್ತುಕೊಳ್ಳುವಂತೆ ಮಾಡುವುದರ ಜೊತೆಗೆ ಅವರಲ್ಲಿ ದಿನದ ಚೈತನ್ಯ ತುಂಬುವ ಸಾಧನವಾಗಬೇಕು. ಶಾಲೆಯ ಗಂಟೆಯ ಶಬ್ದವು ಅತ್ಯಂತ ಮಹತ್ವದ ಪ್ರಚೋದನೆಯಾಗಿದ್ದು ಇದನ್ನು ವ್ಯವಸ್ಥಿತವಾಗಿ ಮಕ್ಕಳ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ಹೊಂದಿಸಿಕೊಂಡು ದಿನದ ಆರಂಭವನ್ನು ಮಾಡಿದಲ್ಲಿ ಮಕ್ಕಳ ಹುಮ್ಮಸ್ಸಿಗೆ ದಾರಿಯಾಗುತ್ತದೆ.

kpeta.weebly.com

kpeta.webly.com

# ಪ್ರಾರ್ಥನೆ.

- ಪ್ರಾರ್ಥನೆ ಎನ್ನುವುದು ಮಕ್ಕಳಲ್ಲಿ ಕಲಿಕೆಯ ಪ್ರಾರಂಭದಲ್ಲಿ ಮಾಡುವ ಒಂದು ಸಂಕಲ್ಪವಾಗಿದೆ. ಈ ಪ್ರಾರ್ಥನೆಯಿಂದ ಮಕ್ಕಳಲ್ಲಿ ಶಿಸ್ತು,ಸಂಯಮ ಹಾಗೂ ಮಾನಸಿಕವಾಗಿ ಕಲಿಕೆಗೆ ತಯಾರಾಗಲು ಸಹಕಾರಿಯಾಗುತ್ತದೆ. ಜೊತೆಯಲ್ಲಿ ಹೊಸ ವಿಚಾರಗಳನ್ನು ಕಲಿಯಲು ದಾರಿಯಾಗುತ್ತದೆ. ಹಾಗಾಗಿ ಪ್ರಾರ್ಥನೆ ಎನ್ನುವುದು ಅತ್ಯಂತ ವಿಶೇಷವಾಗಿ ವಿದ್ಯಾರ್ಥಿ ಜೀವನದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.

kpeta.weebly.com


kpeta.weebly.com

kpeta.webly.com

# ಪ್ರಾರ್ಥನೆಯ ಸ್ವರೂಪ

- ಪ್ರಾರ್ಥನೆಯಲ್ಲಿ ನಾಡಗೀತೆ,ರಾಷ್ಟ್ರಗೀತೆ ಕಡ್ಡಾಯವಾಗಿ ಹಾಡಲೇಬೇಕು.ರಾಜ್ಯಕ್ಕೆ,ರಾಷ್ಟ್ರಕ್ಕೆ ಗೌರವ ನೀಡುವುದು ನಮ್ಮ ಆದ್ಯ ಕರ್ತವ್ಯ.
- ಇವುಗಳ ಜೊತೆಯಲ್ಲಿ ವಂದೇ ಮಾತರಂ ಗೀತೆಯನ್ನು ಸೇರಿಸಿಕೊಳ್ಳಬಹುದು.
- ಮಕ್ಕಳಲ್ಲಿ ಪ್ರಾರ್ಥನೆಯನ್ನು ಆಸಕ್ತಿದಾಯಕವಾಗಿಸಲು ಪಂಚಾಂಗ,ಗಾದೆ ಮಾತು,ವರ್ತಮಾನ ಪತ್ರಿಕೆ,ರಸಪ್ರಶ್ನೆ ಇವುಗಳ ವಾಚನವನ್ನುಸೇರಿಸಿಕೊಳ್ಳಬಹುದು.
- ಪ್ರಾರ್ಥನೆಯನ್ನು ಪ್ರಾರಂಭಿಸಲು ಮಕ್ಕಳನ್ನು ನಿಲ್ಲಿಸುವ ರೀತಿಯಿಂದ ಶಿಸ್ತಿನ ಪರಿಪಾಠವಾಗುತ್ತದೆ. ಹಾಗೆಯೆ ಪ್ರಾರ್ಥನೆಗೆ ನೀಡುವ ಸೂಚನೆಗಳು ಅತ್ಯಂತ ಸ್ಪಷ್ಟವಾಗಿರಬೇಕು.
- ಪ್ರಾರ್ಥನೆಯಲ್ಲಿ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿ,ಶಿಕ್ಷಕರು,ಸಿಬ್ಬಂದಿಗಳು ಹಾಜರಾಗುವುದು ಕಡ್ಡಾಯ.

kpeta.weebly.com

ಪ್ರಾರ್ಥನೆಯ ನಂತರದಲ್ಲಿ ದೈನಂದಿನ ಪಾಠಗಳು ತರಗತಿವಾರು ಸಾಗುತ್ತವೆ. ಜೊತೆಯಲ್ಲಿ ದೈಹಿಕ ಶಿಕ್ಷಣ ಅವಧಿಗಳು ನಡೆಯುವುದು ಮಕ್ಕಳಲ್ಲಿ ಹೊಸ ಉತ್ಸಾಹದ ಜೊತೆ ದೈಹಿಕ ಸದೃಢತೆಯ ಬೆಳವಣಿಗೆಗೆ ಸಹಕಾರಿ ಆಗುತ್ತವೆ. ಕಾರಣ ಶಾಲೆಯಲ್ಲಿ ದೈಹಿಕ ಶಿಕ್ಷಣದ ಪರಿಣಾಮಕಾರಿ ಉಪಯೋಗಕ್ಕಾಗಿ ದಾಖಲಿತ ರೂಪುರೇಷೆ ಇರುವುದು ಅತ್ಯಗತ್ಯವಾಗಿದೆ. ಇದನ್ನು ನಿರ್ವಹಿಸಿಸುವ ಜವಾಬ್ದಾರಿ ದೈಹಿಕ ಶಿಕ್ಷಣ ಶಿಕ್ಷಕರ ಮೇಲಿದೆ. ಅದನ್ನು ಮೇಲ್ವಿಚಾರಣೆ ಮಾಡುವ ಹೊಣೆ ಮುಖ್ಯ ಶಿಕ್ಷಕರದ್ದಾಗಿದೆ.ಇದನ್ನೆ ನಾವು ದೈಹಿಕ ಶಿಕ್ಷಣದ ದಾಖಲೆಗಳು ಹಾಗೂ ನಿರ್ವಹಣೆ ಎಂದು ಉಲ್ಲೇಖಿಸಬಹುದು.

kpeta.weebly.com

kpeta.weebly.com

# ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು

1) ವಾರ್ಷಿಕ ಕ್ರಿಯಾ ಯೋಜನೆ (Yearly plan)
2) ವಾರ್ಷಿಕ ಪಾಠ ಯೋಜನೆ (plan)
3) ಪಾಠದ ಟಿಪ್ಪಣಿ (Lesson Plan)
4) ಶಿಕ್ಷಕರ ವೈಯಕ್ತಿಕ ವೇಳಾಪತ್ರಿಕೆ
5) ಖರೀದಿ ಪುಸ್ತಕ
6) ಕ್ರೀಡಾ ದಾಸ್ತಾನು ಪುಸ್ತಕ (Stock Register of sports materials)
7) ಕ್ರೀಡಾ ಸಾಮಾಗ್ರಿಗಳ ವಿತರಣಾ ವಹಿ (Issue Register of Sports Materials)
8) ದೈಹಿಕ ಶಿಕ್ಷಣ ಪರೀಕ್ಷೆ ಹಾಗೂ ಮೌಲ್ಯಮಾಪನ.
9) ಕ್ರೀಡಾ ಸಮಿತಿ ಆಯ-ವ್ಯಯ ಪುಸ್ತಕ
10) ವೈದ್ಯಕೀಯ ತಪಾಸಣಾ ವಹಿ (ಆರೋಗ್ಯ ಕಾರ್ಡ್) (Health Cards)
11) ವೈದ್ಯಕೀಯ ತಪಾಸಣಾ ಅನುಪಾಲನಾ ವಹಿ.

kpeta.weebly.com

kpeta.webly.com

# ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆಗಳು

12) ಬೇಡಿಕೆ ಪುಸ್ತಕ (Indent Register)

13) ಕ್ರೀಡಾ ಸೂಚನಾ (ಜ್ಞಾಪನ) ಪುಸ್ತಕ (Sports Memo Book)

14) ಕ್ರೀಡಾಸಾಧನ ಪುಸ್ತಕ (Competitions Achievement Register)

15) ಕ್ರೀಡಾ ಸಂಘ (Sports Club)

16) ಗುಂಪು ರಚನಾ ಪುಸ್ತಕ (House formation Register)

17) ಇಂಟ್ರಾಮುರಲ್ಸ್ ಮತ್ತು ಎಕ್ಸ್ಟ್ರಾಮುರಲ್ಸ್ ಪುಸ್ತಕ (Match Register)

18) ಅನುಪಯುಕ್ತ ಕ್ರೀಡಾ ಸಾಮಗ್ರಿಗಳ ವಿಲೇವಾರಿ ಪುಸ್ತಕ.

19) ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಹರಾಜು ವಿಲೇವಾರಿ ಕಡತ

20) ಅನುಪಯುಕ್ತ ಕ್ರೀಡಾ ಸಾಮಗ್ರಿಗಳ ವಿಲೇವಾರಿ

kpeta.weebly.com



kpeta.weebly.com

kpeta.webly.com

# ವಾರ್ಷಿಕ ಕ್ರಿಯಾ ಯೋಜನೆ (Yearly plan)

- ದೈಹಿಕ ಶಿಕ್ಷಣ ವಿಭಾಗದಲ್ಲಿ ಒಂದು ಶೈಕ್ಷಣಿಕ ವರ್ಷದಲ್ಲಿ ಕೈಗೊಳ್ಳಬೇಕಾದ ತಿಂಗಳವಾರು ಯೋಜನೆಯನ್ನು ತೋರಿಸುವ ಒಂದು ದಾಖಲೆಯೇ ವಾರ್ಷಿಕ ಕ್ರಿಯಾ ಯೋಜನೆ.ಇದರಲ್ಲಿ ಪ್ರತಿ ತಿಂಗಳು ಯಾವ ಯಾವ ಚಟುವಟಿಕೆಗಳನ್ನು ಕೈಗೊಳ್ಳಬೇಕು ಎಂಬುದಾಗಿ ಕ್ರಿಯಾಯೋಜನೆಯನ್ನು ರೂಪಿಸಿಕೊಳ್ಳುವುದಾಗಿದೆ.

**ದೈಹಿಕ ಶಿಕ್ಷಣದ ವಾರ್ಷಿಕ ಶಾಲಾ ಕ್ರಿಯಾ ಯೋಜನೆ–2021–22**

| ತಿಂಗಳು | ಕ್ರಿಯಾ ಯೋಜನೆ ವಿಷಯಗಳು |
|---|---|
| ಜೂನ್ | 1. ಶಾಲಾ ಸಮವಸ್ತ್ರ, ಶಿಸ್ತು, ಸ್ವಚ್ಛತೆ, ಸಮಯಪಾಲನೆ ಮೊದಲಾದವುಗಳ ಬಗ್ಗೆ ಮಾಹಿತಿಯನ್ನು ನೀಡುವುದು.<br>2. ಶಾಲಾ ಕ್ರೀಡಾ ಮೈದಾನವನ್ನು ಸಜ್ಜುಗೊಳಿಸುವುದು ಮತ್ತು ಕ್ರೀಡಾ ಅಂಕಣಗಳನ್ನು ರಚಿಸಿಕೊಳ್ಳುವುದು.<br>3. ರಾಷ್ಟ್ರಗೀತೆ ಮತ್ತು ನಾಡಗೀತೆಗಳನ್ನು ನಿಯಮಿತವಾಗಿ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸುವುದು..<br>4. ಮೊದಲನೇ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ವೇಗ, ಬಲ, ಕಷ್ಟಸಹಿಷ್ಣತೆ ಸಾಮರ್ಥ್ಯಗಳನ್ನು ನಮೂನೆ–1 ರ ವಹಿಯಲ್ಲಿ ನಮೂದಿಸುವು.<br>5. ಶಾಲಾ ಹಂತದಲ್ಲಿ ಇಲಾಖೆ ಸಂಘಟಿಸುವ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಏರ್ಪಡಿಸಿ ಕ್ರೀಡಾ ತಂಡಗಳನ್ನು ಆಯ್ಕೆ ಮಾಡಿಕೊಳ್ಳುವುದು. ಕ್ಲಸ್ಟರ್ ಮಟ್ಟದಲ್ಲಿ ಭಾಗವಹಿಸುವ ಪಂದ್ಯಾಟ ಮತ್ತು ಮೇಲಾಟ ಕ್ರೀಡಾ ತಂಡಗಳಿಗೆ ಪೂರ್ವಭಾವಿ ತರಬೇತಿ ನೀಡುವುದು.<br>6. ಕ್ರೀಡಾ ಸಂಘದ ರಚನೆ. |
| ಜುಲೈ | 7. ಕ್ರೀಡಾ ಆಯವ್ಯಯ ಪಟ್ಟಿ ತಯಾರಿಸಿ, ಕ್ರೀಡಾ ಸಮಿತಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.<br>8. ವಲಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಪ್ರವೇಶ ಪತ್ರಗಳನ್ನು ಸಿದ್ಧಪಡಿಸಿಕೊಳ್ಳುವುದು ಮತ್ತು ಪೋಷಕರ ಗಮನಕ್ಕೆ ತಂದು ಪ್ರವೇಶ ಪತ್ರದ ಹಿಂಭಾಗದಲ್ಲಿರುವ ಮಾಹಿತಿಯನ್ನು ತುಂಬುವುದು.<br>9. ಮೊದಲನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ–02ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |


kpeta.weebly.com

kpeta.webly.com

| | |
|---|---|
| ಆಗಸ್ಟ್ | 10. ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ.<br>11. ಸ್ವಾತಂತ್ರ್ಯ ದಿನಾಚರಣೆ ಪೂರ್ವ ಸಿದ್ಧತೆ ಮತ್ತು ಆಚರಿಸುವುದು<br>12. ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವುದು.<br>13. ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಣೆ ನಡೆಸಿ,ಆರೋಗ್ಯ ವಹಿಯಲ್ಲಿ ನಮೂದಿಸುವುದು.<br>14. ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವುದು.<br>15. ರಾಷ್ಟ್ರೀಯ ಕ್ರೀಡಾ ದಿನಾಚರಣೆ(ದ್ಯಾನ್ ಚಂದ್ ಜನ್ಮ ದಿನಾಚರಣೆ) ಆಗಸ್ಟ್ 29 ರಂದು ಆಚರಿಸುವುದು.<br>16. ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆ ಪ್ರಯುಕ್ತ ಕ್ರೀಡಾ ಸಂಘದಡಿಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು<br>17. ಎರಡನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ- 2ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |
| ಸೆಪ್ಟೆಂಬರ್ | 18. ಮೊದಲನೇ ಸಂಕಲನಾತ್ಮಕ ಪರೀಕ್ಷೆ ನಡೆಸಲು ನೀಲನಕ್ಷೆ ರಚನೆ ಅದರ ಪ್ರಕಾರ ಪ್ರಶ್ನೆ ಪತ್ರಿಕೆ ರಚಿಸುವುದು ಮತ್ತು ಉತ್ತರ ಪತ್ರಿಕೆ ಸಿದ್ಧಪಡಿಸಿಕೊಳ್ಳುವುದು.<br>19. ಮೊದಲನೇ ಸಂಕಲನಾತ್ಮಕ ಪರೀಕ್ಷೆ(ಲಿಖಿತ) ನಡೆಸಿ ಮೌಲ್ಯಮಾಪನದ ನಂತರ ತಾತ್ವಿಕ ಕಲಿಕಾ ಸಾಮರ್ಥ್ಯಗಳನ್ನು ನಮೂನೆ-3ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |
| ಅಕ್ಟೋಬರ್ | 20. ಮಹಾತ್ಮ ಗಾಂಧಿ ಜಯಂತಿ ಆಚರಣೆ.<br>21. ಆರೋಗ್ಯ ಸಂಘದ ಅಡಿಯಲ್ಲಿ ಆರೋಗ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.<br>22. ಕ್ರೀಡಾ ಸಲಕರಣೆಗಳ ಖರೀದಿ.<br>23. ಕನ್ನಡ ರಾಜೋತ್ಸವ ಆಚರಣೆ ಸಿದ್ಧತೆ.<br>24. ವಿಭಾಗಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ |

kpeta.weebly.com

kpeta.weebly.com

| | |
|---|---|
| ನವೆಂಬರ್ | 25. ಕನ್ನಡ ರಾಜ್ಯೋತ್ಸವ ಆಚರಣೆ.<br>26. ಮಕ್ಕಳ ದಿನಾಚರಣೆ ಅಚರಿಸುವುದು..<br>27. ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ.<br>28. ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ<br>29. ಮೂರನೇ ರೂಪಣಾತ್ಮಕ ಪರೀಕ್ಷೆ(ಪ್ರಾಯೋಗಿಕ) ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ–2ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು.<br>30. ಶಾಲಾ ವಾರ್ಷಿಕ ಕ್ರೀಡಾಕೂಟ ಸಂಘಟಿಸುವುದು. |
| ಡಿಸೆಂಬರ್ | 31. ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಪ್ರೋತ್ಸಾಹ<br>32. ಕ್ರೀಡಾ ಸಂಘದ ಅಡಿಯಲ್ಲಿ ಕ್ರೀಡಾ ಸಲಕರಣೆಗಳ ವಸ್ತು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳುವುದು. 33. ಅನುಪಯುಕ್ತ ಕ್ರೀಡಾ ಸಲಕರಣೆಗಳನ್ನು ಪಟ್ಟಿಮಾಡಿ ಹರಾಜಿನ ಅನುಮೋದನೆ ಪ್ರಕ್ರಿಯಗಾಗಿ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.<br>34. ಸ್ವಾಮಿ ವಿವೇಕಾನಂದರ ದಿನಾಚರಣೆ. |
| ಜನವರಿ | 35. ಸುಭಾಸ್ ಚಂದ್ರಬೋಸರ ಜನ್ಮ ದಿನಾಚರಣೆ ಆಚರಿಸುವುದು.<br>36. ಗಣರಾಜ್ಯೋತ್ಸವದ ಪೂರ್ವ ಸಿದ್ಧತೆ ಹಾಗೂ ಆಚರಣೆ<br>37. ಎರಡನೇ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ವೇಗ,ಬಲ,ಕಷ್ಟಸಹಿಷ್ಣತೆ, ಸಾಮರ್ಥ್ಯಗಳನ್ನು ನಮೂನೆ–1ರ ವಹಿಯಲ್ಲಿ ನಮೂದಿಸುವುದು.<br>38. ನಾಲ್ಕನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ–02ರ ವಹಿಯಲ್ಲಿ ನಮೂದಿಸುವುದು. |


kpeta.weebly.com

kpeta.webly.com

| | |
|---|---|
| ಫೆಬ್ರವರಿ | 38. ನಾಲ್ಕನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ–02ರ ವಹಿಯಲ್ಲಿ ನಮೂದಿಸುವುದು.<br>39. ಎರಡನೇ ಸಂಕಲನಾತ್ಮಕ ಪರೀಕ್ಷೆಗೆ ನೀಲನಕ್ಷೆ ಪ್ರಕಾರ ಪ್ರಶ್ನೆ ಪತ್ರಿಕೆ ರಚಿಸುವುದು(ದ್ವಿತೀಯ ಸೆಮಿಸ್ಟರ್)<br>40. ಎರಡನೇ ಸಂಕಲನಾತ್ಮಕ ಪರೀಕ್ಷೆ ನಡೆಸಿ ಮೌಲ್ಯಮಾಪನ ನಂತರ ತಾತ್ವಿಕ ಕಲಿಕಾ ಸಾಮರ್ಥ್ಯಗಳನ್ನು ನಮೂನೆ–3ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |
| ಮಾರ್ಚ್ | 41. ಕ್ರೀಡಾ ಸಲಕರಣೆಗಳನ್ನು ಉಪಯುಕ್ತ ಹಾಗೂ ಅನುಪಯುಕ್ತ ಸಲಕರಣೆಗಳನ್ನು ಪಟ್ಟಿಮಾಡಿ ಮಾರ್ಚ್ 31ರೊಳಗೆ ಕ್ರೀಡಾ ದಾಸ್ತಾನು ಪರಿಶೀಲನ ಪ್ರಮಾಣ ಪತ್ರವನ್ನು ದೃಢೀಕರಿಸಿಕೊಳ್ಳುವುದು.<br>42. ವಿದ್ಯಾರ್ಥಿಯ ಎರಡು ಸೆಮಿಸ್ಟರ್‌ಗಳ ಶೈಕ್ಷಣಿಕ ಸಾಧನೆಯನ್ನು ನಮೂನೆ–03ರ ವಹಿಯಲ್ಲಿ ನಮೂದಿಸುವುದು. |
| ಏಪ್ರಿಲ್ | 43. ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಸುವುದು.<br>44. ಫಲಿತಾಂಶ ಘೋಷಣೆ.<br>45. ಅಂಬೇಡ್ಕರ್‌ದಿನಾಚರಣೆಯೊಂದಿಗೆ ಶೈಕ್ಷಣಿಕ ಚಟುವಟಿಕೆ ಮುಕ್ತಾಯ. |



kpeta.weebly.com

kpeta.webly.com

# ವಾರ್ಷಿಕ ಪಾಠ ಯೋಜನೆ
# (Annual Programme of work)

ಈ ದಾಖಲೆಯು ತರಗತಿವಾರು ಪಠ್ಯಕ್ರಮವನ್ನು ಆಧರಿಸಿ ಅದನ್ನು ಪೂರ್ಣಗೊಳಿಸಲು ತಿಂಗಳವಾರು ಲಭ್ಯವಿರುವ ತರಗತಿಗಳ ಆಧಾರದ ಮೇಲೆ ವಿಂಗಡಿಸಿ ರಚಿಸಿಕೊಳ್ಳುವ ದಾಖಲೆಯಾಗಿದೆ. ಇಲ್ಲಿ ವಿಷಯವನ್ನು ತಾತ್ವಿಕ ಹಾಗೂ ಪ್ರಾಯೋಗಿಕ ಎಂದು ವಿಂಗಡಿಸಿ ಹಂಚಿಕೆ ಮಾಡಲಾಗುತ್ತದೆ.

**8ನೇ ತರಗತಿಯ ವಾರ್ಷಿಕ ಪಾಠ ಯೋಜನೆ**

| ತಿಂಗಳು | ಅಧ್ಯಾಯ | ಅವಧಿ | ಪ್ರಾಯೋಗಿಕ | ತಾತ್ವಿಕ | ಕಲಿಕಾಂಶಗಳು | ಮು.ಶಿ. ಸಹಿ | ದೈ.ಶಿ.ಶಿ ಸಹಿ | ಷರಾ |
|---|---|---|---|---|---|---|---|---|
| ಜೂನ್ | ದೈಹಿಕ ಸಾಮರ್ಥ್ಯ ಪರೀಕ್ಷೆ | 16 | 6 | | ದೈಹಿಕ ಸಾಮರ್ಥ್ಯ ಪರೀಕ್ಷೆಗಳು<br>–: ಬಾಲಕರಿಗೆ :–<br>1. 50 ಮೀ. ಓಟ (ವೇಗ)<br>2. 20 ನಿಮಿಷ ನಡಿಗೆ (ಕಷ್ಟಸಹಿಷ್ಣತೆ)<br>3. ಉದ್ದ ಜಿಗಿತ (ಬಲ)<br>–: ಬಾಲಕಿಯರಿಗಾಗಿ :–<br>1. 50 ಮೀ. ಓಟ (ವೇಗ)<br>2. 10 ನಿಮಿಷ ನಡಿಗೆ (ಕಷ್ಟಸಹಿಷ್ಣತೆ)<br>3. ಉದ್ದ ಜಿಗಿತ (ಬಲ) | | | |
| | ದೈಹಿಕ ಶಿಕ್ಷಣದ ಪ್ರಯೋಜನಗಳು | | | 2 | ದೈಹಿಕ ಶಿಕ್ಷಣದ ಪ್ರಯೋಜನಗಳು | | | |
| | ವಾಲಿಬಾಲ್ | | 5 | | 1. ಅಂಡರ್ ಹ್ಯಾಂಡ್ ಪಾಸ್<br>2. ಅಪ್ಪರ್ ಹ್ಯಾಂಡ್ ಪಾಸ್<br>3. ಅಂಡರ್ ಹ್ಯಾಂಡ್ ಸರ್ವಿಸ್ | | | |
| | ವಾಲಿಬಾಲ್ | | | 3 | 1. ವಾಲಿಬಾಲ್ ಇತಿಹಾಸ,<br>2. ಅಂಕಣದ ಮಾದರಿ ಅಳತೆ,<br>3. ಆಟದಲ್ಲಿ ಬಳಸುವ ಉಪಕರಣಗಳು<br>4. ವಾಲಿಬಾಲ್ ನಿಯಮಗಳು | | | |


kpeta.weebly.com

kpeta.webly.com

# ಪಾಠದ ಟಿಪ್ಪಣಿ (Lesson Plan)

ಇದು ವಾರ್ಷಿಕ ಪಾಠಯೋಜನೆಯಂತೆ ಹಂಚಿಕೆಯಾದ ಪಠ್ಯಕ್ರಮವನ್ನು ಕಲಿಸಲು ತೆಗೆದುಕೊಳ್ಳುವ ತರಗತಿಯ ಯೋಜನೆಯಾಗಿದೆ.ಇಲ್ಲಿ ಯಾವ ರೀತಿಯಲ್ಲಿ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪಿಸಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ.



kpeta.weebly.com



kpeta.weebly.com

kpeta.webly.com

# ಮಾದರಿ ಪಾಠ ಟಿಪ್ಪಣಿ ನಮೂನೆ (ತಾತ್ವಿಕ)

**ವಿಷಯ: ದೈಹಿಕ ಶಿಕ್ಷಣ** **ಶಿಕ್ಷಕರ ಹೆಸರು: ---------**

**ವರ್ಗ: 10ನೇ ತರಗತಿ** **ಘಟಕ : ಚಕ್ರ ಎಸೆತ**

**ಪಾಠದ ಚಕ್ರ ಎಸೆತದ ಸೆಕ್ಟರ್ ರಚನೆ, ಚಕ್ರದ ಗ್ಗೆ ಅರಿವು ಸ್ಪರ್ಧೆಯ ನಿಯಮಗಳನ್ನು ತಿಳಿಸಿ, ಪ್ರಖ್ಯಾತ ಆಟಗಾರರನ್ನು ಪರಿಚಯಿಸುವುದು.**

| ವಿಭಾಗ/ಅವಧಿ | ಕಲಿಕಾಂಶಗಳು | ಅನುಕೂಲಿಸಲು ರೂಪಿಸಿದ ಚಟುವಟಿಕೆ | ಪಾಠೋಪಕರಣಗಳು | ಮೌಲ್ಯಮಾಪನದ ತಂತ್ರ ಸಾಧನ | ಶಿಕ್ಷಕರ ಸ್ವ ಅವಲೋಕನ | ದಿನಾಂಕ |
|---|---|---|---|---|---|---|
| ತಾತ್ವಿಕ<br>ಅವಧಿಗಳು | 1. ಅಂಕಣದ ರಚನೆ ಮತ್ತು ಅಳತೆ | ಚಕ್ರ ಎಸೆತದ ವೃತ್ತ/ಸೆಕ್ಟರ್ ರಚನೆ<br>ವೃತ್ತದ ವ್ಯಾಸ–2.50 ಮೀ. ಸೆಕ್ಟರ್ ಕೊನೆ– 34.920 ವಿಸ್ತೃತ | ಪಠ್ಯ ಪುಸ್ತಕ,<br>ಸೀಮೆಸುಣ್ಣ, ಕಪ್ಪುಹಲಗೆ | ಕಪ್ಪು ಹಲಗೆಯ ಮೇಲೆ ವೃತ್ತ ರಚಿಸುವಂತೆ ಹೇಳಿ ವೀಕ್ಷಣೆ ಮೂಲಕ ತಿಳಿಯುವುದು.<br>ತಂತ್ರ: ವೀಕ್ಷಣೆ | | |
| | 2. ಚಕ್ರದ (ಡಿಸ್ಕಸ್) ರಚನೆ | ಎಸೆತೆದ ಚಕ್ರವು ಮರದಿಂದ ರಚನೆಯಾಗಿದ್ದು, ಸುತ್ತಲೂ<br>ಲೋಹದ ಅಂಚನ್ನು ಅಳವಡಿಸಿರುತ್ತಾರೆ. | ಚಕ್ರ (ಡಿಸ್ಕಸ್) | ಪ್ರತಿಯೊಕ್ಬ ವಿದ್ಯಾರ್ಥಿ ಚಕ್ರವನ್ನು ಕೈಯಲ್ಲಿ ಹಿಡಿದು ಪ್ರಾಯೋಗಿಕವಾ ಗಿ<br>ತಿಳಿಯುವುದು, ತಂತ್ರ:<br>ವೀಕ್ಷಣೆ | | |
| | 3. ಸ್ಪರ್ಧೆಯ ನಿಯಮಗಳು | ಪುಸ್ತಕದಲ್ಲಿಯಿರುವಂತೆ ನಿಯಮಗಳನ್ನು ತಿಳಿಸುವುದು/ಓಧಿಸುವುದು. | ಪಠ್ಯಪುಸ್ತಕ,<br>ಸೀಮೆಸುಣ್ಣ,<br>ಕಪ್ಪುಹಲಗೆ | ಮೌಖಿ ಕ ಹಾಗೂ ತಾತ್ವಿಕ ಪರೀಕ್ಷಾ ವಿಧಾನ | | |
| | 4. ರಾಷ್ಟ್ರ ಹಾಗೂ ಅಂತರ್ ರಾಷ್ಟ್ರೀಯ ಕ್ರೀಡಾಪಟುಗಳ ವಿವರ ಹಾಗೂ ದಾಖಲೆಗಳು | ಕೃಷ್ಣ ಪೂನಿಯ, ವಿಕಾಸಗೌಡ, ಯುರ್ಗನ್, ಶುಲ್ಟ್, ಇವರುಗಳ ಪರಿಚಯ ಹಾಗೂ ದಾಖಲೆಗಳು | ಪಠ್ಯಪುಸ್ತಕ<br>ಕ್ರೀಡಾಪಟುಗಳ ಾವಚಿತ್ರಗಳು | ವೀಕ್ಷಣಾ ಗುರುತಿಸುವಿಕೆ ಹಾಗೂ ಕಿರು ಪರೀಕ್ಷೆ ನಡೆಸುವುದು. | | |



kpeta.weebly.com

kpeta.webly.com

# ಶಿಕ್ಷಕರ ವೈಯಕ್ತಿಕ ವೇಳಾಪತ್ರಿಕೆ

ಇದು ಶಾಲೆಯಲ್ಲಿ ಜರುಗುವ ಎಲ್ಲ ತರಗತಿಗಳ ವೇಳಾ ಪತ್ರಿಕೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ತೆಗೆದುಕೊಳ್ಳುವ ವರ್ಗವಾರು ತರಗತಿಯ ಹಂಚಿಕೆಯ ಯೋಜನೆಯಾಗಿದೆ. ವಾರದಲ್ಲಿ ಒಂದು ವರ್ಗಕ್ಕೆ ನಾಲ್ಕು ತರಗತಿಗಳು ಹಾಗೂ ಇಡೀ ಶಾಲೆಯ ಮಕ್ಕಳನ್ನು ಒಳಗೊಂಡ ಒಂದು ಸಾಮೂಹಿಕ ವ್ಯಾಯಾಮದ ತರಗತಿಯನ್ನು ದೈಹಿಕ ಶಿಕ್ಷಣ ಶಿಕ್ಷಕರು ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು.

kpeta.weebly.com

kpeta.webly.com

# ಖರೀದಿ ಪುಸ್ತಕ

- ಇದು ಪ್ರತಿ ವರ್ಷ ಖರೀದಿ ಮಾಡುವ ಕ್ರೀಡಾ ಸಾಮಗ್ರಿಗಳ ಕುರಿತಾದ ದಾಖಲೆಯಾಗಿದೆ. ಇಲ್ಲಿ ಮುಖ್ಯವಾಗಿ ಮಾರಾಟಗಾರರ ಮಾಹಿತಿ ದೊರಕುತ್ತದೆ.

kpeta.weebly.com

| ಅ ನಂ | ವಸ್ತುವಿನ ಹೆಸರು | ದಿನಾಂಕ | ಯಾರಿಂದ ಖರೀದಿಸಿದ್ದು | ರಶೀದಿ ಸಂ. & ದಿನಾಂಕ | ದರ ಒಂದಕ್ಕೆ | ಒಟ್ಟು ಖರೀದಿಸಿದ ಸಂಖ್ಯೆ | ಒಟ್ಟು ಮೊತ್ತ |
|---|---|---|---|---|---|---|---|
| | | | | | | | |



kpeta.weebly.com

kpeta.webly.com

# ಕ್ರೀಡಾ ದಾಸ್ತಾನು ಪುಸ್ತಕ

- (Stock Register of sports materials)

**ವಸ್ತುವಿನ ಹೆಸರು:**

| ಕ್ರ. ಸಂ. | ದಿನಾಂಕ | ಯಾರಿಂದ ಖರೀದಿಸಿದ್ದು | ರಶೀದಿ ಸಂ. & ದಿನಾಂಕ | ದರ ಒಂದಕ್ಕೆ | ಒಟ್ಟು ಖರೀದಿಸಿದ ಸಂಖ್ಯೆ | ಒಟ್ಟು ಮೊತ್ತ | ಶಾಲಾಯಲ್ಲಿರುವ ಸಾಮಾಗ್ರಿಗಳು | | | | ಒಟ್ಟು ಸಾಮಾಗ್ರಿಗಳು ಮಾರ್ಚ್31 ಕ್ಕೆ | | | | ಕ್ರೀಡಾ ಕಾರ್ಯದರ್ಶಿಯ ಸಹಿ | ಮುಖ್ಯ ಶಿಕ್ಷಕರ ಸಹಿ | ಷರಾ |
|---|---|---|---|---|---|---|---|---|---|---|---|---|---|---|---|---|---|
| | | | | | | | ಹೊಸದು | ಉಪಯೋಗ್ಯ | ಅನುಪಯೋಗ್ಯ | ಒಟ್ಟು | ಹೊಸದು | ಉಪಯೋಗ್ಯ | ಅನುಪಯೋಗ್ಯ | ಒಟ್ಟು | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |
| | | | | | | | | | | | | | | | | | |

kpeta.weebly.com



kpeta.weebly.com

kpeta.webly.com

# ವಾರ್ಷಿಕ ಪರಿಶೀಲನೆ ವಿವರ (ಕಾಲಂ)

____________ವರ್ಷದ ಕ್ರೀಡಾ ಸಾಮಾಗ್ರಿಗಳು ಮಾರ್ಚ 31ಕ್ಕೆ ಇರುವಂತೆ

ಶಾಲೆಯ ಹೆಸರು: ದಿನಾಂಕ

| ಕ್ರ.ಸಂ. | ಕ್ರೀಡಾ ಉಪಕರಣಗಳ ಹೆಸರು | ಪರಿವಿಡಿಯಲ್ಲಿ ಬರೆದ ಕ್ರ.ಸಂ. | ಪುಟದ ಸಂಖ್ಯೆ | ಉಪಕರಣಗಳ ವಸ್ತು ಸ್ಥಿತಿ | | | ಒಟ್ಟು | ಷರಾ |
|---|---|---|---|---|---|---|---|---|
| | | | | ಉಪಯುಕ್ತ | | ಅನುಪಯುಕ್ತ | | |
| | | | | ಹೊಸದು | ಹಳೆಯದು | | | |
| 1 | | | | | | | | |
| 2 | | | | | | | | |
| 3 | | | | | | | | |
| 4 | | | | | | | | |
| 5 | | | | | | | | |

kpeta.weebly.com

ದೈಹಿಕ ಶಿಕ್ಷಣ ಶಿಕ್ಷಕರ ಸಹಿ ಮುಖ್ಯಾಧ್ಯಾಪಕರ ಸಹಿ

kpeta.weebly.com

# ಸೂಚನೆಗಳು: ಸಲಹೆಗಳು:

- ❖ಹಳೆಯ ಕ್ರೀಡಾ ದಾಸ್ತಾನು ಪುಸ್ತಕ ಮುಗಿದ ಮೇಲೆ ಹೊಸದಾದ ಕ್ರೀಡಾ ದಾಸ್ತಾನು ಪುಸ್ತಕಕ್ಕೆ 2 ಎಂದು ಸಂಖ್ಯೆಯನ್ನು ಕೊಡಬೇಕು.

- ❖ಪರಿವಿಡಿಯಲ್ಲಿ ತೋರಿಸಿದಂತೆ ಒಂದು ಪುಟದಲ್ಲಿ ಒಂದೇ ಕ್ರೀಡಾ ಸಾಮಾಗ್ರಿ ಹೆಸರನ್ನು ಬರೆಯಬೇಕು.

- ❖ಮೇಲಿನ ಉದಾಹರಣೆಯಲ್ಲಿ ಕಾಣಿಸಿದಂತೆ ಕಾಲಂಗಳನ್ನು ವರ್ಷದ ಕೊನೆಗೆ ಅಂದರೆ ಮಾರ್ಚ್ 31ಕ್ಕೆ ಭರ್ತಿ ಮಾಡಲು ಮರೆಯಬಾರದು.

- ❖ದಾಸ್ತಾನು ಪುಸ್ತಕದ ಪ್ರಥಮ ಹಾಳೆಯಲ್ಲಿ ಪ್ರಮಾಣಪತ್ರ, ನಂತರ ಪರಿವಿಡಿಗೆ, ನಂತರ ಕ್ರೀಡಾಸಾಮಾಗ್ರಿಗಳ ದಾಸ್ತಾನು, ವಾರ್ಷಿಕ ಪರಿಶೀಲನೆ, ನಂತರ ಪರಿಶೀಲನಾಧಿಕಾರಿಗಳ ಷರಾ, ಹಸ್ತಾಂತರ, ಮುಖ್ಯಸ್ಥರ ಷರಾ

kpeta.weebly.com

kpeta.webly.com

# ಈ ರೀತಿಯಾಗಿ ಪ್ರಮಾಣ ಪತ್ರವನ್ನು ದಾಖಲಿಸಬೇಕು

---------------ಶೈಕ್ಷಣಿಕ ವರ್ಷಕ್ಕಾಗಿ ಕ್ರೀಡಾ ಸಾಮಗ್ರಿಗಳನ್ನು ಮಾರ್ಚ್ 31ರಂದು ಇದ್ದಂತೆ ಭೌತಿಕವಾಗಿ ಪರಿಶೀಲಿಸಲಾಗಿ ಅವುಗಳು ಕ್ರೀಡಾ ದಾಸ್ತಾನು ಪುಸ್ತಕದ ಪುಟ ಸಂಖ್ಯೆ--- ------ರಿಂದ ----------ರವರೆಗೆ ಪುಟ ಸಂಖ್ಯೆ--- ------ರಲ್ಲಿ ಅನುಕ್ರಮ ಸಂಖ್ಯೆ --------ರ ವಸ್ತುಗಳು ಅನುಪಯುಕ್ತ/ಉಪಯೋಗಿಸಲ್ಪಟ್ಟದ್ದು ಉಳಿದ ವಸ್ತುಗಳು ಸುಸ್ಥಿತಿಯಲ್ಲಿ ಇರುತ್ತವೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪರಿಶೀಲನಾಧಿಕಾರಿಗಳ ಸಹಿ

kpeta.weebly.com



kpeta.weebly.com

kpeta.webly.com

# ಕ್ರೀಡಾ ಸಾಮಾಗ್ರಿಗಳ ವಿತರಣಾ ವಹಿ

# (Issue Register of Sports Materials)

| ಕ್ರಮ ಸಂಖ್ಯೆ | ದಿನಾಂಕ | ವಿದ್ಯಾರ್ಥಿಯ ಹೆಸರು | ತರಗತಿ | ಸಾಮಾಗ್ರಿಗಳ ಹೆಸರು | ಸಾಮಾಗ್ರಿಗಳ ಸಂಖ್ಯೆ | ವಿದ್ಯಾರ್ಥಿಯ ಸಹಿ (ಪಡೆದುದಕ್ಕೆ) | ಹಿಂತಿರುಗಿದ ದಿನಾಂಕ | ವಸ್ತು ಸ್ಥಿತಿ | ವಿದ್ಯಾರ್ಥಿಯ ಸಹಿ (ಹಿಂತಿರುಗಿಸಿದಕ್ಕೆ) | (ದೈ.ಶಿ.ಶಿ)ಸಹಿ | ಷರಾ |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |


kpeta.weebly.com

kpeta.webly.com

# ದೈಹಿಕ ಶಿಕ್ಷಣ ಪರೀಕ್ಷೆ ಹಾಗೂ ಮೌಲ್ಯಮಾಪನ.

ದೈಹಿಕ ಶಿಕ್ಷಣ ವಿಷಯದಲ್ಲಿ ಸಿ ಸಿ ಇ ಆಧಾರಿತ ಪರೀಕ್ಷೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳಲಾಗುತ್ತದೆ. ಗ್ರೇಡ್ ಪದ್ಧತಿಯ ಮೂಲಕ ವಿದ್ಯಾರ್ಥಿಯ ಸಾಮರ್ಥ್ಯವನ್ನು ನಿಗದಿಪಡಿಸಲಾಗುತ್ತದೆ. ಅದರ ಜೊತೆಯಲ್ಲಿ ದೈಹಿಕ ಸಾಮರ್ಥ್ಯವನ್ನು ಗುರುತಿಸಲಾಗುತ್ತದೆ. ಇವುಗಳ ನಿರ್ವಹಣೆಯು ಅತ್ಯಂತ ಮಹತ್ವದ ವಿಷಯವಾಗಿರುತ್ತದೆ. ದೈಹಿಕ ಶಿಕ್ಷಣ ಶಿಕ್ಷಕರು ಇದನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಬೇಕಾಗುತ್ತದೆ.



ಆ ದಾಖಲೆಗಳು ಈ ರೀತಿ ಇವೆ.

ಎ) ದೈಹಿಕ ಸಾಮಾರ್ಥ್ಯ ಅಂಕವಹಿ

ಬಿ) ರೂಪಣಾತ್ಮಕ & ಸಂಕಲನಾತ್ಮಕ ಅಂಕವಹಿ

ಸಿ) ಕ್ರೋಢೀಕೃತ ಅಂಕವಹಿ

ಡಿ) ಚಟುವಟಿಕೆಗಳ ಅಂಕವಹಿ ( 10ನೇ ತರಗತಿಗೆ ಮಾತ್ರ)

kpeta.weebly.com



kpeta.weebly.com

# ದೈಹಿಕ ಸಾಮಾರ್ಥ್ಯ ಅಂಕವಹಿ

| ಹಾ. ಸಂ | ವಿದ್ಯಾರ್ಥಿಯ ಹೆಸರು | ಪರೀಕ್ಷೆಗಳು | ವೇಗ: 30 ಮೀಟರ ಓಟ | | ಬಲ: ಗುಂಡು ಎಸೆತ | | ಕಷ್ಟ ಸಹಿಷ್ಣುತೆ :ಸಿಟ್ ಅಪ್ಸ್ | | ಪೂರ್ಣಗೊಳಿಸುವಿಕೆ [3 ಚಟುವಟಿಕೆ] ಅಂಶ(1) | ಒಟ್ಟು ಅಂಶಗಳು (10) | ಶ್ರೇಣಿ |
|---|---|---|---|---|---|---|---|---|---|---|---|
| ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಗಳಿಸಿದಂತಹ ಅಂಶಗಳು | | | | | | | | | | | |
| ದೈಹಿಕ ಸಾಮರ್ಥ್ಯ ಪರೀಕ್ಷಾ ಅಂಶವಹಿ : ನಮೂನೆ–1 | | | | | | | | | | | |
| ತರಗತಿ :8 | | | ವಿಭಾಗ : ಬಾಲಕ/ ಬಾಲಕಿಯರು | | | | | | ವರ್ಷ:2020 –2021 | | |
| | | | ಸರಾಸರಿ | | ಸರಾಸರಿ | | ಸರಾಸರಿ | | | | |
| | | | 1– | | 1– | | 1– | | | | |
| | | | 2– | | 2– | | 2– | | | | |
| | | | ಸಮಯ | ಅಂಶ(3) | ಮೀ.ಗಳು | ಅಂಶ(3) | ಸಂಖ್ಯೆ | ಅಂಶ(3) | | | |
| 1 | | 1 ಜೂನ್ | | | | | | | | | |
| | | 2 ಜನವರಿ | | | | | | | | | |
| 2 | | 1 ಜೂನ್ | | | | | | | | | |
| | | 2 ಜನವರಿ | | | | | | | | | |

kpeta.weebly.com



kpeta.weebly.com

kpeta.webly.com

# ರೂಪಣಾತ್ಮಕ ಅಂಕವಹಿ

## ಪ್ರಾಯೋಗಿಕ ಪಾಠಗಳ ರೂಪಣಾತ್ಮಕ ಮೌಲ್ಯಮಾಪನ- ನಮೂನೆ 2

ತರಗತಿ:8 ವಿಷಯ: ದೈಹಿಕ ಶಿಕ್ಷಣ ವರ್ಷ: 2020-21

| ಹಾಜರಿ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ರೂ.ಮೌ.ಮಾಪನ | ಘಟಕ | ಪಾಠದ ಹೆಸರು | ಕೌಶಲ್ಯ-1 ಹಂತಗಳು | | | | | ಕೌಶಲ್ಯ-2 ಹಂತಗಳು | | | | | ಒಟ್ಟು ಅಂಕ(10) | ಶ್ರೇಣಿ |
|---|---|---|---|---|---|---|---|---|---|---|---|---|---|---|---|---|
| | | | | | 1 | 2 | 3 | 4 | 5 | 1 | 2 | 3 | 4 | 5 | | |
| 1 | | 1 (ಜುಲೈ) | ಗುಂಪು ಆಟಗಳು | | | | | | | | | | | | | |
| | | 2 (ಸೆಪ್ಟೆಂಬರ್) | ತಾಳಬದ್ಧ ಚಟುವಟಿಕೆಗಳು | | | | | | | | | | | | | |
| | | 3 (ಡಿಸೆಂಬರ್) | ಮೇಲಾಟಗಳು | | | | | | | | | | | | | |
| | | 4(ಫೆಬ್ರುವರಿ) | ಯೋಗಾಸನ | | | | | | | | | | | | | |

kpeta.weebly.com

kpeta.webly.com

# ಕ್ರೋಢೀಕೃತ ಅಂಕವಹಿ

| | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| 2 | ದೈಹಿಕ ಶಿಕ್ಷಣದ ಶೈಕ್ಷಣಿಕ ಸಾಧನೆಯ ವೈಯಕ್ತಿಕ ಕ್ರೋಢೀಕೃತ ಅಂಕ ವಹಿ (ನಮೂನೆ-03) | | | | | | | | | | | | | | | | | | | |
| 3 | ತರಗತಿ :8 | | | | | | | | | | | | | | | | ವರ್ಷ : 2020-21 | | | |
| 4 | | | ಮೊದಲನೇ ಸೆಮಿಸ್ಟರ್ | | | | | | | | ಎರಡನೇ ಸೆಮಿಸ್ಟರ್ | | | | | | | | | |
| 5 | ಹಾ.ಸಂ | ವಿದ್ಯಾರ್ಥಿಯ ಹೆಸರು | ರೂಪಣಾತ್ಮಕ ಮೌಲ್ಯ ಮಾಪನ-1( ಜುಲೈ) ಅಂಕ 10 | | ರೂಪಣಾತ್ಮಕ ಮೌಲ್ಯಮಾಪನ-2 (ಆಗಸ್ಟ್)ಅಂಕ 10 | | ಸಂಕಲನಾತ್ಮಕ ಮೌಲ್ಯಮಾಪನ-1 (ಸೆಪ್ಟೆಂಬರ್)ಅಂಕ 30 | | ರೂ.ಮೌ. 1(10)+ ರೂ.ಮೌ. 2(10) + ಸಂ.ಮೌ.. 1 (30) (ಒಟ್ಟು ಅಂಕ 50) | | ರೂಪಣಾತ್ಮಕ ಮೌಲ್ಯಮಾಪನ-3 (ಡಿಸೆಂಬರ್) ಅಂಕ 10 | | ರೂಪಣಾತ್ಮಕ ಮೌಲ್ಯ ಮಾಪನ-4( ಫೆಬ್ರುವರಿ) ಅಂಕ 10 | | ಸಂಕಲನಾತ್ಮಕ ಮೌಲ್ಯಮಾಪನ-2 (ಮಾರ್ಚ್)ಅಂಕ 30 | | ರೂ.ಮೌ.3(10) + ರೂ.ಮೌ. 4(10) + ಸಂ.ಮೌ.. 2 (30) (ಒಟ್ಟು ಅಂಕ 50) | | F.A.1-10 F.A.2-10 F.A.3.-10 F.A.4-10 2 ಸಂಕಲನಾತ್ಮಕ -60 ವಾರ್ಷಿಕ ಒಟ್ಟು-100 | |
| 6 | | | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ | ಅಂಕ | ಶ್ರೇಣಿ |
| 7 | 1 | | | | | | | | | | | | | | | | | | | |
| 8 | 2 | | | | | | | | | | | | | | | | | | | |


kpeta.weebly.com

kpeta.webly.com

# ಕ್ರೀಡಾ ಸಮಿತಿ ಆಯ-ವ್ಯಯ ಪುಸ್ತಕ

ಇದು ವಾರ್ಷಿಕವಾಗಿ ಸಂಗ್ರಹವಾಗುವ ಹಣಕಾಸಿನ ಆಯವ್ಯಯವಾಗಿದೆ. ಇದನ್ನು ತಯಾರಿಯಲ್ಲಿ ಇಡಬೇಕು.

| ಅ ನಂ | ಅದಾಯದ ವಿವರ | ಮೊತ್ತ | ಅ ನಂ | ವ್ಯಯದ ವಿವರ | ಮೊತ್ತ |
|---|---|---|---|---|---|
| 1 | 8ನೇ ವರ್ಗದ ವಿದ್ಯಾರ್ಥಿಗಳಿಂದ | 600.00 | 1 | ಕ್ರೀಡಾ ವಸ್ತುಗಳ ಖರೀದಿಗೆ | 1260.00 |
| 2 | 9ನೇ ವರ್ಗದ ವಿದ್ಯಾರ್ಥಿಗಳಿಂದ | 700.00 | 2 | ಕ್ರೀಡಾಕೂಟಕ್ಕೆ | 540.00 |
| 3 | 10ನೇ ವರ್ಗದ ವಿದ್ಯಾರ್ಥಿಗಳಿಂದ | 500.00 | 3 | | |
| ಅಂತೂ | | 1800.00 | | | 1800.00 |

ದೈಹಿಕ ಶಿಕ್ಷಣ ಶಿಕ್ಷಕರ ಸಹಿ ಮುಖ್ಯೋಪಾಧ್ಯಾಯರ ಸಹಿ

1. 50 ಪೈಸೆ ಅಥವಾ ಅದಕ್ಕಿಂತ ಕಡಿಮೆ ಹಣವಾದರೆ 50 ಪೈಸೆ ಅಥವಾ ಅದಕ್ಕಿಂತ ಹೆಚ್ಚಾಗಿ ಮುಂದಿನ ರೂಗೆ ನೋಡಿ ಸರಿದೂಗಿಸುವುದು.
2. ಇತರೆ 5%ಹಣವನ್ನು ಕ್ರೀಡಾ ಸಾಮಾಗ್ರಿಗಳ ರಿಪೇರಿಗೆ ಅಥವಾ ಇತರೆ ಕ್ರೀಡಾ ಸಾಮಾಗ್ರಿಗಳ ರಿಪೇರಿಗೆ ಅಥವಾ ಇತರೆ ಕ್ರೀಡಾ ಸಾಮಾಗ್ರಿಗಳ ವೆಚ್ಚಕ್ಕೆ.
3. ಪಂದ್ಯಾಟಗಳಿಗೆ ನಿಗಧಿಪಡಿಸಿರುವ ±ೀ.30ಹಣ ಪಂದ್ಯಾಟಗಳಿಗೆ ಕೊರತೆಯಾದರೆ ಕ್ರೀಡಾಪ್ರಸಕ್ತ/ ಸಂಚಿತ ಅಥವಾ ಯಾವುದೇ ಪ್ರಸಕ್ತ/ ಸಂಚಿತ ನಿಧಿಯಿಂದ ಪಡೆಯಲು ಆಯುಕ್ತರ ಆದೇ±ವಿದೆ.


kpeta.weebly.com

kpeta.webly.com

# ವೈದ್ಯಕೀಯ ತಪಾಸಣಾ ವಹಿ (ಆರೋಗ್ಯ ಕಾರ್ಡ್) (Health Cards)

ಪ್ರತಿಯೊಬ್ಬ ವಿದ್ಯಾರ್ಥಿಯ ಆರೋಗ್ಯದ ಕುರಿತಾದ ಜವಾಬ್ದಾರಿ ದೈಹಿಕ ಶಿಕ್ಷಕರದ್ದಾಗಿರುತ್ತದೆ. ವರ್ಷದಲ್ಲಿ ಎರಡು ಬಾರಿ ವಿದ್ಯಾರ್ಥಿಯ ತೂಕ,ಎತ್ತರವನ್ನು ಅಳೆದು ಅದನ್ನು ದಾಖಲೆ ಮಾಡಬೇಕಾಗಿರುತ್ತದೆ. ಅದರ ಜೊತೆಯಲ್ಲಿ ವೈದ್ಯಕೀಯ ತಪಾಸಣೆಯನ್ನು ಮಾಡಿಸಿ ಅವರ ಸಲಹೆಗಳನ್ನು ದಾಖಲಿಸಿ ಇಡುವುದು ಮಹತ್ವದ್ದಾಗಿದೆ. ಹಾಗೇಯೆ ಅವರು ವಿದ್ಯಾರ್ಥಿಗಳಿಗೆ ನೀಡುವ ಸಲಹೆಗಳನ್ನು ಅನುಪಾಲಿಸುವುದು ಅತ್ಯಂತ ಅವಶ್ಯಕ.ಉದಾ: ಕಿವಿಯ ದೋಷ,ಹೃದಯ ಸಂಬಂಧಿ,ಕಣ್ಣಿನ ದೋಷ ಇತ್ಯಾದಿ.


kpeta.weebly.com

kpeta.webly.com

# ವೈದ್ಯಕೀಯ ತಪಾಸಣಾ ಅನುಪಾಲನಾ ವಹಿ.

ವೈದ್ಯರು ನೀಡಿದ ಸಲಹೆಯನ್ನು ಅನುಪಾಲಿ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಎಂಬುದನ್ನು ಇಲ್ಲಿ ದಾಖಲಿಸಿ ಇಡಬೇಕು

| ಅ ನಂ | ವಿದ್ಯಾರ್ಥಿಯ ಹೆಸರು | ವರ್ಗ | ನೀಡಿದ ಸಲಹೆ ಹಾಗೂ ದಿನಾಂಕ | ತೆಗೆದುಕೊಂಡ ಕ್ರಮ | ಪರಿಹಾರ | ಷರಾ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |

kpeta.weebly.com

kpeta.webly.com

# ಬೇಡಿಕೆ ಪುಸ್ತಕ (Indent Register)

- ಇಲ್ಲಿ ಒಂದು ವಹಿಯನ್ನಾಗಲಿ ಇಲ್ಲವೇ ಫೈಲ್ ಆಗಲೀ ನಿರ್ವಹಣೆ ಮಾಡಬಹುದಾಗಿದ್ದು, ಆಯಾ ಶೈಕ್ಷಣಿಕ ವರ್ಷದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾಭಿವೃದ್ಧಿ/ಸಂಘಟನೆಗಳಿಗೆ ಕುರಿತಂತೆ ಅವಶ್ಯಕತೆಗಳ ಪೂರೈಕೆಗಾಗಿ ಮುಖ್ಯಸ್ಥರಿಗೆ ಲಿಖಿತವಾಗಿ ಬೇಡಿಕೆ ಸಲ್ಲಿಸಿ ದಾಖಲೆ ಇಡುವುದು ಇದರ ಮುಖ್ಯ ಉದ್ದೇಶ. ಕೆಳಕಾಣಿಸಿದ ರೀತಿಯಲ್ಲಿ ಸಂದರ್ಭಕ್ಕನುಸಾರವಾಗಿ ಬೇಡಿಕೆ/ಕೋರಿಕೆ ಸಲ್ಲಿಸಬಹುದು.
- ಕ್ರೀಡೋಪಕರಣ ಪೂರೈಕೆ (ಸೂಚನೆ–ಮುಖ್ಯಸ್ಥರು ಲಭ್ಯ ಕ್ರೀಡೋಪಕರಣಗಳನ್ನು ವರ್ಷದ ಕೊನೆಗೆ ಮಾರ್ಚ್‌ದಲ್ಲಿ ಪೂರೈಸಿದ್ದರೆ. ಜೂನ್‌ನಲ್ಲಿ ಪ್ರಾರಂಭವಾಗಿನಿಂದ ಉಪಯೋಗಿಸಲು ಅನುಕೂಲವಾಗುವುದು.
- ಅವಶ್ಯಕವಾಗಿ ಬೇಕಾಗಿರುವ ವಹಿಗಳ ಪೂರೈಕೆಗಾಗಿ
- ಕ್ರೀಡಾಕೂಟ ಸಂಘಟನೆಯ ವೆಚ್ಚ
- ಕ್ರೀಡಾಕೂಟಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಲು ಹಾಗೂ ಅವರ ಜೊತೆಗೆ ಬರಬೇಕಾದ ತಂಡದ ವ್ಯವಸ್ಥಾಪಕರ ನೇಮಕಾತಿಗಾಗಿ ಕೋರಿಕೆ.
- ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವವರಿಗೆ ಪ್ರವಾಸ/ದಿನಭತ್ಯೆ ಪೂರೈಕೆಗಾಗಿ ಕೋರಿಕೆ.
- ದಿನಾಂಕ ನಮೂದಿಸಿ ಬೇಡಿಕೆ ಪತ್ರ ಸಲ್ಲಿಸುವುದು ಕೈಗೊಂಡ ಕ್ರಮದ ಬಗ್ಗೆ ದಾಖಲಿಸುವುದಾಗಿದೆ.


kpeta.weebly.com

kpeta.webly.com

# ಕ್ರೀಡಾ ಸೂಚನಾ (ಜ್ಞಾಪನ) ಪುಸ್ತಕ (Sports Memo Book)

- ಆಯಾ ಶೈಕ್ಷಣಿಕ ವರ್ಷದಲ್ಲಿ ದೈಹಿಕ ಶಿಕ್ಷಣ ಕ್ರೀಡೆಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮದ ಕುರಿತು ಶಾಲೆಯ ಎಲ್ಲ ಮಕ್ಕಳಿಗೆ ಅಧಿಕೃತವಾಗಿ ಬರವಣಿಗೆಯ ಮೂಲಕ ಪ್ರಕಟಪಡಿಸಿ ಆ ಕುರಿತು ದಾಖಲೆ ಇಡುವುದಕ್ಕಾಗಿ ಈ ಪುಸ್ತಕದ ಅವಶ್ಯಕತೆ ಇರುತ್ತದೆ. ಕೆಲವು ಉದಾಹರಣೆಗಳು ಕೆಳಗಿನಂತಿವೆ. (ದೈಹಿಕ ಶಿಕ್ಷಣ ಮತ್ತು ಕ್ರೀಡೆಗೆ ಸಂಬಂಧಿಸಿದಂತೆ ಮಾತ್ರ)

- ಶಾಲಾ ಮಟ್ಟದ ಕ್ರೀಡಾಕೂಟ ಸಂಘಟಿಸುವ ಹಾಗೂ ಕ್ರೀಡಾಪಟುಗಳ ಆಯ್ಕೆ ಬಗ್ಗೆ ಜ್ಞಾಪನ ಹೊರಡಿಸಿ ತರಗತಿವಾರು ತಿಳಿಸಿ ಆ ತರಗತಿಯಲ್ಲಿ ಶಿಕ್ಷಕರು ಪಡೆಯುವುದು. ಶಾಲಾಂತರ್ಗತ ಸ್ಪರ್ಧೆಗಳ ಸಂಘಟನೆ/ವಿವರ ಪ್ರಕಟಣೆ ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಹರಾಜು ಏರ್ಪಡಿಸಬೇಕಾದಲ್ಲಿ ಪ್ರಕಟಿಸಿ ದಾಖಲೆ ಇಡುವುದು ಇತ್ಯಾದಿ.

kpeta.webly.com

# ಕ್ರೀಡಾಸಾಧನ ಪುಸ್ತಕ (Competitions Achievement Register)

ಶೈಕ್ಷಣಿಕ ವರ್ಷ:

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ತರಗತಿ | ದಾಖಲಾತಿ ಸಂಖ್ಯೆ | ಜನ್ಮ ದಿನಾಂಕ | ಭಾಗವಹಿಸಿದ ಸ್ಪರ್ಧೆ | ಫಲಿತಾಂಶ(ಪಡೆದ ಸ್ಥಾನ) | | | | | |
|---|---|---|---|---|---|---|---|---|---|---|---|
| | | | | | | ಕೇಂದ್ರ ಮಟ್ಟ | ವಲಯ ಮಟ್ಟ | ತಾಲ್ಲೂಕು ಮಟ್ಟ | ಜಿಲ್ಲಾ ಮಟ್ಟ | ವಿಭಾಗ ಮಟ್ಟ | ರಾಜ್ಯ ಮಟ್ಟ |
| 1 | | | | | | | | | | | |
| 2 | | | | | | | | | | | |
| 3 | | | | | | | | | | | |
| 4 | | | | | | | | | | | |
| 5 | | | | | | | | | | | |
| 6 | | | | | | | | | | | |
| 7 | | | | | | | | | | | |
| 8 | | | | | | | | | | | |


kpeta.weebly.com

kpeta.webly.com

# ಕ್ರೀಡಾ ಸಂಘ (Sports Club)

ಕ್ರೀಡಾ ಸಂಘ ಶಾಲೆಯಲ್ಲಿ ರಚನೆ ಮಾಡುವುದು ಕಡ್ಡಾಯವಾಗಿದೆ.

| ಹುದ್ದೆ | ಜವಾಬ್ದಾರಿ |
|---|---|
| ಗೌರವ ಅಧ್ಯಕ್ಷರು | ಮುಖ್ಯೋಪಾಧ್ಯಾಯರು |
| ಮಾರ್ಗದರ್ಶಕರು | ದೈಹಿಕ ಶಿಕ್ಷಣ ಶಿಕ್ಷಕರು |
| ಅಧ್ಯಕ್ಷರು | ವಿದ್ಯಾರ್ಥಿಗಳು |
| ಉಪಾಧ್ಯಕ್ಷರು | ವಿದ್ಯಾರ್ಥಿಗಳು |
| ಕಾರ್ಯದರ್ಶಿಗಳು | ವಿದ್ಯಾರ್ಥಿಗಳು |
| ಸಹ ಕಾರ್ಯದರ್ಶಿ | ವಿದ್ಯಾರ್ಥಿಗಳು |
| ಖಜಾಂಚಿ | ವಿದ್ಯಾರ್ಥಿಗಳು |

kpeta.weebly.com

ದೈಹಿಕ ಶಿಕ್ಷಣ ಶಿಕ್ಷಕರ ಸಹಿ        ಮುಖ್ಯೋಪಾಧ್ಯಾಯರು

kpeta.weebly.com

# ಗುಂಪು ರಚನಾ ಪುಸ್ತಕ

# (House formation Register)

- ಕ್ರೀಡಾ ಸ್ಪರ್ಧೆಯ ದೈಹಿಕ ಸಾಮಾರ್ಥ್ಯವನ್ನು ಅವಲಂಬಿಸಿದದು, ಸಮಬಲ ಅಥವಾ ಸಮಾನ ಸಾಮಾರ್ಥ್ಯವುಳ್ಳವರ ಮಧ್ಯ ಕ್ರೀಡಾಸ್ಪರ್ಧೆ ಜರಗುಬೇಕು ಎಂಬ ಉದ್ದೇಶ ಈಡೇರಿಕೆಗೆ ಎಲ್ಲ ತರಗತಿ ಮಕ್ಕಳನ್ನೊಳಗೊಂಡ ಗುಂಪುಗಳನ್ನು ರಚಿಸಿ, ದಾಖಲೆ ಇಡಲು ಈ ಪುಸ್ತಕದ ಅವಶ್ಯಕತೆ ಇದೆ.
- **ಸಲಹೆಗಳು:**
- ಮೇಲಿನ ತರಗತಿ ಮಕ್ಕಳ ದೈಹಿಕ ಸಾಮಾರ್ಥ್ಯ ಕೆಳವರ್ಗದವರಿಗಿಂತ ಹೆಚ್ಚಾಗಿರುವುದರಿಂದ ತರಗತಿಗಳ ಮಧ್ಯದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಬಾರದು.
- ಪ್ರತಿ ಗುಂಪು ಕಡಿಮೆ ಸಂಖ್ಯೆ ಮಕ್ಕಳು ಇರುವಂತೆ ಕ್ರಮ ಕೈಗೊಂಡರೆ ಗುಂಪುಗಳ ಮಧ್ಯೆ ಏರ್ಪಡಿಸಿದ ಸ್ಪರ್ಧೆಯಲ್ಲಿ ಆ ಗುಂಪಿನ ಪ್ರತಿಯೊಬ್ಬರೂ ಭಾಗವಹಿಸಲು ಅವಕಾಶ ಸಿಗುತ್ತದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಗುಂಪುಗಳನ್ನು ರಚಿಸಬೇಕು.
- ಪ್ರತಿ ಗುಂಪಿನಲ್ಲಿ ಕ್ರೀಡಾಪಟುಗಳು, ಕಲಾಕಾರರು, ಭಾಷಣಕಾರರು, ಬುದ್ಧಿವಮತರು, ಹಾಡುಗರು ಹಾಗೂ ಸಮಬಲವುಳ್ಳವರು ಬರುವಂತೆ ಗುಂಪುಗಳ ರಚನೆ ಮಾಡುವುದು ಸೂಕ್ತ.
- ಗಂಡು ಹಾಗೂ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಗುಂಪುಗಳನ್ನು ರಚಿಸಿ ಸ್ವಾತಂತ್ರ್ಯ ಯೋಧರ, ಸಾಹಿತಿಗಳ, ನದಿಗಳ, ಹೂವುಗಳ ಇಲ್ಲವೆ ಬಣ್ಣಗಳ ಇತ್ಯಾದಿ ಹೆಸರು ಕೊಟ್ಟು ವಿಶೇಷ ಬಣ್ಣದ ಧ್ವಜ ನಿರ್ಮಿಸಬೇಕು.
- ಗುಂಪು ಗುಂಪುಗಳ ಮಧ್ಯೆ ಸ್ಪರ್ಧೆ ಅಂದರ ಶಾಲಾಂತರ್ಗತ ಸ್ಪರ್ಧೆ ಏರ್ಪಡಿಸಿ, ಮಕ್ಕಳಲ್ಲಿ ಸ್ಪರ್ಧಾ ಮನೋಭಾವನೆಯನ್ನು ಮೂಡಿಸುವ ಪ್ರಯತ್ನ ಕೈಗೊಳ್ಳಬೇಕು.
- ಆಯಾ ವರ್ಷಕ್ಕೆ ರಚಿಸಿದ ಗುಂಪು ಹಾಗೂ ಗುಂಪಿನಲ್ಲಿ ಬರುವ ಮಕ್ಕಳ ಹೆಸರುಗಳನ್ನು ಬರೆದು ದಾಖಲೆ ಇಡಬೇಕು.

kpeta.weebly.com

kpeta.webly.com

# ಇಂಟ್ರಾಮುರಲ್ ಮತ್ತು ಎಕ್ಸ್ಟ್ರಾಮುರಲ್ ಪುಸ್ತಕ (Match Register)

- *ಒಂದು ಶಾಲೆಯಲ್ಲಿ ಬಾಲಕರು/ಬಾಲಕಿಯರಿಗಾಗಿ ಪ್ರತ್ಯೇಕವಾಗಿ ರಚನೆಗೊಂಡ ಗುಂಪುಗಳ ಮಧ್ಯೆ ಸ್ಪರ್ಧೆಗಳು ಜರುಗಿದಾಗ ಅದು ಶಾಲಾಂತರ್ಗತ ಸ್ಪರ್ಧೆ (Intra Mural) ಎಂತಲೂ ,ಒಂದು ವೇಳೆ ಶಾಲೆಯು ಬೇರೊಂದು ಶಾಲೆಯ ಮಕ್ಕಳ ಜೊತೆ ಸ್ಪರ್ಧಿಸಿದರೆ ಅದು ಅಂತರ್ ಶಾಲಾ ಸ್ಪರ್ಧೆ (Extra Mural) ಎಂತಲೂ ಕರೆಯುತ್ತಾರೆ.*
- ಲಾಭಗಳು: ನಿರಂತರ ಶಿಸ್ತುಬದ್ದವಾಗಿ ಇಂತ ಸ್ಪರ್ಧೆಗಳನ್ನು ಏರ್ಪಡಿಸುವುದರಿಂದ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಹೆಚ್ಚುತ್ತದೆ.
- ಸೋಲು/ಗೆಲುವುಗಳ ಕಹಿ–ಸಿಹಿ ಅನುಭವ ತಿಳಿಯುತ್ತದೆ.
- ಸೋತಾಗ ಅದನ್ನು ಅರಗಿಸಿಕೊಳ್ಳುವ ಹಾಗೂ ಮನೋಸ್ಥೈರ್ಯ ಜೊತೆಗೆ ಆತ್ಮಬಲ ಹೆಚ್ಚುತ್ತದೆ.
- ಸೋಲನ್ನು ಗೆಲ್ಲುವ ಆತ್ಮ ವಿಶ್ವಾಸ ಹೆಚ್ಚುತ್ತದೆ.
- ಇದರಿಂದಾಗಿ ಮಕ್ಕಳಲ್ಲಿ ಧನಾತ್ಮಕ ಭಾವನೆ ವೃದ್ಧಿಗೊಳ್ಳುತ್ತದೆ.
- ಸೋಲೇ ಗೆಲುವಿನ ಮೂಲ ಎಂಬ ಉಕ್ತಿಯಂತೆ ಗೆಲ್ಲಲೇಬೇಕೆಂಬ ಛಲ, ಪ್ರಯತ್ನ ಮಾಡುವ ಭಾವನೆ ಕುದುರಲು ಸಹಕಾರಿ ಆಗುತ್ತದೆ.


kpeta.weebly.com

kpeta.webly.com

# ಅನುಪಯುಕ್ತ ಕ್ರೀಡಾ ಸಾಮಗ್ರಿಗಳ ವಿಲೇವಾರಿ

- ಶಾಲೆಗಳಲ್ಲಿ ಮಕ್ಕಳಿಗೆ ಆಟವಾಡಲು ಹಾಗೂ ಕಲಿಸುವುದಕ್ಕೆ ಹೆಚ್ಚಿನ ರೀತಿ ಕ್ರೀಡಾ ಸಾಮಾಗ್ರಿಗಳನ್ನು ಬಳಸುವುದರಿಂದ ಅವುಗಳು ಅನುಪಯುಕ್ತವಾಗುತ್ತವೆ. ಈ ರೀತಿ ಅನುಪಯುಕ್ತ ಆದ ಕ್ರೀಡಾ ಸಾಮಾಗ್ರಿಗಳನ್ನು ಇಲಾಖೆಯ ನಿಯಮಾನುಸಾರ ವಿಲೇವಾರಿ ಮಾಡಿದರೆ ಕ್ರೀಡಾ ದಾಸ್ತಾನುವಹಿ ಅಚ್ಚುಕಟ್ಟಾಗಿರುತ್ತದೆ.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ ಮಾಡಲು ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನುನಿಯಮಾನುಸಾರ ಪಟ್ಟಿ ಮಾಡಬೇಕು. ಇಲ್ಲಿ ಒಂದೇ ವಸ್ತು ಅನುಪಯುಕ್ತವಾಗಿದ್ದರೂ ಬೇರೆ ಬೇರೆ ವರ್ಷ ಅಥವಾ ದಿನಾಂಕಗಳಲ್ಲಿ ಖರೀದಿಸಿದರೆ ಪ್ರತ್ಯೇಕವಾಗಿ ಪಟ್ಟಿಯಲ್ಲಿ ಬರೆಯಬೇಕು. ಮುಂದೆ ಮಾದರಿ ನೀಡಲಾಗಿದೆ.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿ ಮಾಡಲು ಪಟ್ಟಿ ತಯಾರಿಸಿದ ನಂತರ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ಸಹಿಯನ್ನು ಮಾಡಬೇಕು.
- ಅನುಮತಿ ಪತ್ರವನ್ನು ಬರೆದು ಪತ್ರದ ಜೊತೆ ಪಟ್ಟಿಯನ್ನು ಲಗತ್ತಿಸಿ ಯಾರಿಗೆ ಕಳುಹಿಸಬೇಕೋ ಅವರಲ್ಲಿ ನೀಡಿ ನಕಲಿ ಪ್ರತಿಯನ್ನು ಪಡೆದು ವಹಿಯಲ್ಲಿ ಇಡಬೇಕು.

kpeta.weebly.com



kpeta.weebly.com

kpeta.webly.com

- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಒಟ್ಟು ಮೌಲ್ಯವು ಈ ಕೆಳಕಂಡಂತೆ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಒಟ್ಟು ಮೌಲ್ಯವು ಈ ಕೆಳಕಂಡಂತೆ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.
- ಎ) 10000 ರೂ.ಗಿಂತ ಕಡಿಮೆ ಇದ್ದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ
- ಬಿ) 25000 ರೂ.ಗಿಂತ ಕಡಿಮೆ ಇದ್ದರೆ ಉಪನಿರ್ದೇಶಕರಿಂದ ಅನುಮತಿ
- ಸಿ) 35000 ರೂ.ಗಿಂತ ಕಡಿಮೆ ಇದ್ದರೆ ವಿಭಾಗೀಯ ಉಪನಿರ್ದೇಶಕರು,ದೈಹಿಕ ಶಿಕ್ಷಣ,
- ಡಿ )35000 ರೂ. ಮೇಲ್ಪಟ್ಟು ಇದ್ದರೆ ನಿರ್ದೇಶಕರು ಪ್ರೌಢಶಿಕ್ಷಣ,ಆಯುಕ್ತರ ಕಛೇರಿ,ಬೆಂಗಳೂರು.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ಪಟ್ಟಿಯನ್ನು ಕಳುಹಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳು ಬಂದು ಪರಿಶೀಲಿಸಿ ಅನುಮತಿ ಪತ್ರ ನೀಡಿದ ನಂತರ ಹರಾಜು ಮಾಡಬೇಕು.

kpeta.weebly.com



kpeta.weebly.com

kpeta.weebly.com

- **ಸೂಚನೆ:** ಅಧಿಕಾರಿಗಳು ಈ ಕೆಳಕಂಡ ದಾಖಲೆಗಳನ್ನು ಪರಿಶೀಲಿಸುವರು.
- ಎ)ಕ್ರೀಡಾ ಸಾಮಾಗ್ರಿಗಳ ವಿತರಣಾ ವಹಿ ಬಿ) ಕ್ರೀಡಾ ದಾಸ್ತಾನು ವಹಿ
- ಆದ್ದರಿಂದ ಇವುಗಳ ನಿರ್ವಹಣೆ ಸಮರ್ಪಕವಾಗಿರಬೇಕು ಹಾಗೂ ಕ್ರೀಡಾ ಸಾಮಾಗ್ರಿಗಳು ವಿತರಣೆಯಾಗಿರಬೇಕು.
- ಅಧಿಕಾರಿಗಳಿಂದ ಅನುಮತಿ ಪತ್ರ ಬಂದ ಮೇಲೆ ಹರಾಜು ಮಾಡುವ ಕ್ರೀಡಾ ಸಾಮಾಗ್ರಿಗಳು ಮತ್ತು ದಿನಾಂಕ ಸಮಯವನ್ನು ನಮೂದಿಸಿ ಪ್ರಕಟಿಸಬೇಕು. (ಪತ್ರಿಕೆಗಳ/ಸೂಚನಾ ಫಲಕಗಳು/ಕರಪತ್ರಗಳು)
- ಹರಾಜು ಸಂದರ್ಭದಲ್ಲಿ ಕೆಲವು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಅವುಗಳನ್ನು ಮುಂದಿನ ಪಟ್ಟಿಯಲ್ಲಿ ತಿಳಿಸಲಾಗುವುದು.
- ಹರಾಜಿನಿಂದ ಬಂದ ಹಣವನ್ನು ಪ್ರಸ್ತುತ/ಸಂಚಿತ ಕ್ರೀಡಾನಿಧಿಗೆ ಒಂದು ದಿನದ ಒಳಗಾಗಿ ಕಟ್ಟಬೇಕು. ಹಾಗೂ ರಶೀದಿಯನ್ನು ಕಡತಕ್ಕೆ ಹಾಕಬೇಕು.
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳ ವಿಲೇವಾರಿಗೆ ಸಂಬಂಧಿಸಿ ಎಲ್ಲಾ ಪತ್ರ ವ್ಯವಹಾರಗಳು ಕಡತಗೊಳಿಸಿ ಮೇಲ್ವಿಚಾರಣೆಗೆ ಬಂದ ಸಂದರ್ಭದಲ್ಲಿ ಹಾಜರುಪಡಿಸಬೇಕು.
- ಹರಾಜು ಹಾಕಿದ ಕ್ರೀಡಾ ಸಾಮಾಗ್ರಿಗಳನ್ನು ದಾಸ್ತಾನು ವಹಿಯಲ್ಲಿ ಕ್ರೀಡಾ ಸಾಮಾಗ್ರಿಯ ಬಳಿ ಉಪನಿರ್ದೇಶಕರ ಪತ್ರ ಸಂಖ್ಯೆ ಮತ್ತು ದಿನಾಂಕ ಬರೆದು ದಾಸ್ತಾನು ವಹಿಯಿಂದ ಕೈಬಿಡಬೇಕು. ನಂತರ ಮುಖ್ಯ ಶಿಕ್ಷಕರ ಸಹಿಯನ್ನು ಮಾಡಿಸಬೇಕು.
- ಪ್ರತಿ ವರ್ಷ ಮಾರ್ಚ್ 31ರ ಒಳಗೆ ಪ್ರಕ್ರಿಯೆ ಮುಗಿದಿರಬೇಕು.


kpeta.weebly.com

kpeta.webly.com

# ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನು ಪಟ್ಟಿ ಮಾಡುವ ಕ್ರಮ

| ಕ್ರ.ಸಂ. | ಅನುಪಯುಕ್ತ ಉಪಕರಣಗಳ ಹೆಸರು | ದಾಸ್ತಾನು ವಹಿ ಪುಟ ಸಂಖ್ಯೆ | ಖರೀದಿಸಿದ ದಿನಾಂಕ | ಅನುಪಯುಕ್ತ ಸಂಖ್ಯೆ | ದರ | ಒಟ್ಟು | ಷರಾ |
|---|---|---|---|---|---|---|---|
| 1 | ಅಳತೆ ಪಟ್ಟಿ | 02ರಿಂದ 03 | 22/2/2004 | 1 | 295.00 | 295.00 | |
| 2 | ವಾಲಿಬಾಲ್ | 15----16 | 15/11/2008 | 3 | 150.00 | 450.00 | |
| 3 | ವಾಲಿಬಾಲ್ | 15----16 | 18/03/2008 | 2 | 200.00 | 400.00 | |
| 4 | ವಿಜ್ಞಲ್ | 9----10 | 28/03/2008 | 2 | 20.00 | 40.00 | |
| 5 | ಹ್ಯಾಮರ್ | 25----26 | 30/03/2003 | 2 | 220.00 | 440.00 | |
| | ಹೀಗೆ ಮುಂದುವರೆಸುವುದು | | | | | | |

(ಒಟ್ಟು ಹಣ--------------------ರೂ--------------ಪೈಸೆ ಮಾತ್ರ)

**ದೃಢೀಕರಣ**

1. ಈ ಪಟ್ಟಿಯಲ್ಲಿ ರುವ ಕ್ರೀಡಾ ಉಪಕರಣಗಳನ್ನು ಈ ಹಿಂದಿನ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.
2. ಪಟ್ಟಿಯಲ್ಲಿ ರುವ ಎಲ್ಲಾ ಉಪಕರಣಗಳನ್ನು ಇವುಗಳ ಯೋಗ್ಯ ಉಪಯೋಗದಿಂದ ಅನುಪಯುಕ್ತವಾಗಿರುತ್ತದೆ.
3. ತಮ್ಮಿಂದ ಅನುಮತಿ ಬಂದ ತಕ್ಷಣ ಇಲಾಖಾ ನಿಯಮಾನುಸಾರ ಕ್ರೀಡೋಪಕರಣಗಳನ್ನು ಲಿಲಾವು (ಹರಾಜು) ಮಾಡಲಾಗುವುದು. ಹಾಗೂ ಹರಾಜಿನಿಂದ ಬಂದ ಹಣವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು.

ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿಗಳು

ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ


kpeta.weebly.com

kpeta.weebly.com
ಶಾಲೆ ಹೆಸರು

ಪತ್ರ ಸಂಖ್ಯೆ: 10/ದೈ.ಶಿ.ಅ.ವ.ವಿ/2021-22 ದಿನಾಂಕ-------------

ರವರಿಗೆ,

ಶ್ರೀ ಉಪನಿರ್ದೇಶಕರು,

ಸಾರ್ವಜನಿಕ ಶಿಕ್ಷಣ ಇಲಾಖೆ

-------------ಜಿಲ್ಲೆ.

ಮಾನ್ಯರೇ

ವಿಷಯ: ಅನುಪಯುಕ್ತ ಕ್ರೀಡಾ ಉಪಕರಣಗಳನ್ನು ಕ್ರೀಡಾ ದಾಸ್ತಾನು ವಹಿಯಿಂದ ಕೈಬಿಡಲು ಹಾಗೂ ಲಿಲಾವು (ಹರಾಜು) ಮಾಡಲು ಅನುಮತಿ ಪಡೆಯುವುದರ ಬಗ್ಗೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ------------------------- ಶಾಲೆಯ ಕ್ರೀಡಾ ದಾಸ್ತಾನು ವಹಿಯಲ್ಲಿ ಸುಮಾರು ವರ್ಷದಿಂದ ಉಪಯೋಗಕ್ಕೆ ಬಾರದ ಹಾಗೂ ಶಿಥಿಲಗೊಂಡಿರುವ ಉಪಕರಣಗಳಿದ್ದು, ಈ ಉಪಕರಣಗಳನ್ನು ಕ್ರೀಡಾ ದಾಸ್ತಾನು ವಹಿಯಿಂದ ಕೈಬಿಡಲು ಹಾಗೂ ಅವುಗಳನ್ನು ಹರಾಜು ಹಾಕಿ ಬಂದ ಹಣವನ್ನು ಸಂಬಂಧಿಸಿದ ಖಾತೆಗೆ ಜಮಾ ಮಾಡಲು ತಾವು ಅನುಮತಿ ನೀಡಬೇಕೆಂದು ಕೋರಿದೆ.

ಅನುಪಯುಕ್ತ ಕ್ರೀಡಾ ಉಪಕರಣಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಮುಖ್ಯ ಶಿಕ್ಷಕರ ಸಹಿ


kpeta.weebly.com

kpeta.webly.com

# ಅನುಪಯುಕ್ತ ಕ್ರೀಡಾ ಸಾಮಗ್ರಿಗಳ ವಿಲೇವಾರಿ ಪುಸ್ತಕ

ದಿನಾಂಕ:------------

| ಕ್ರ. ಸಂ | ಅನುಪಯುಕ್ತ ಕ್ರೀಡಾ ಸಾಮಾಗ್ರಿಯ ಹೆಸರು | ಕ್ರೀಡಾ ಸಾಮಗ್ರಿಯ ಸಂಖ್ಯೆ | ಮೂಲ ದರ | ಹರಾಜುದಾರರ ಕರೆದ ಹಣ | | | ಅತಿ ಹೆಚ್ಚು ಕರೆದ ದರ | ವಸ್ತು ಪಡೆದವರ ಹೆಸರು | ಸಹಿ | ಷರಾ ನಗದು/ಚೆಕ್ (ಸಂಖ್ಯೆ) |
|---|---|---|---|---|---|---|---|---|---|---|
| | | | | ಪ್ರಥಮ ಹರಾಜುದಾರ | ದ್ವಿತೀಯ ಹರಾಜುದಾರ | ತೃತೀಯ ಹರಾಜುದಾರ | | | | |
| **1** | ಅಳತೆ ಪಟ್ಟಿ | **1** | **13.00** | **14.00** | **16.00** | **16.50** | **16.50** | | | |
| **2** | ವಾಲಿಬಾಲ್ | 2 | 95.00 | 100.00 | 110.00 | 115.00 | 115.00 | | | |
| **3** | ವಾಲಿಬಾಲ್ | 3 | 78.00 | 80.00 | 90.00 | 70.00 | 90.00 | | | |
| **4** | ವೀಸಲ್ | 1 | 15.00 | 20.00 | 25.00 | 26.00 | 25.00 | | | |
| **5** | ಹ್ಯಾಮರ್ | 1 | 250.00 | 270.00 | 255.00 | 260.00 | 270.00 | | | |
| | ಹೀಗೆ ಮುಂದುವರೆಸುವುದು | | | | | | | | | |
| | ಒಟ್ಟು | | | | | | | | | |

(ಒಟ್ಟು ಹಣ ---------- ರೂ. ----------- ಪೈಸೆ ಮಾತ್ರ

ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

ಸೂಚನೆ:

- ಈ ಹಣವನ್ನು .ಶಾಲೆಯ ಸಂಚಿತ ನಿಧಿಗೆ ಜಮಾಯಿಸಬೇಕು
- ಅನುಪಯುಕ್ತ ಕ್ರೀಡಾ ಸಾಮಾಗ್ರಿಗಳನ್ನು ಒಟ್ಟುಗೂಡಿಸಿ ಛಾಯಾಪ್ರತಿಯನ್ನು ತೆಗೆಸಬೇಕು.
- ಹರಾಜು ಪ್ರಕ್ರಿಯೆಗೆ ಇಲಾಖೆಯು ಅನುಮತಿ ಪತ್ರದಲ್ಲಿನೀಡಿರುವ ನಿಬಂಧನೆಗಳನ್ನು ಪಾಲಿಸಬೇಕು



kpeta.weebly.com

kpeta.webly.com

# ಧನ್ಯವಾದಗಳು

ಶ್ರೀ ವಸಂತ ಪಿ ಭಂಡಾರಿ
ಜಿಲ್ಲಾದೈಹಿಕ ಶಿಕ್ಷಣ ಅಧಿಕಾರಿಗಳು,
ಉಪನಿರ್ದೇಶಕರ ಕಛೇರಿ,ಶಿರಸಿ ಶೈಕ್ಷಣಿಕ ಜಿಲ್ಲೆ ಶಿರಸಿ

kpeta.weebly.com








kpeta.weebly.com